(*ಬೃಹದಾರಣ್ಯಕ,* ೧:೪:೧೦), **"ಎಲ್ಲಿ ಬೇರೆಯದನ್ನು ನೋಡುವುದಿಲ್ಲವೋ ಅದು ಬ್ರಹ್ಮ"** (*ಛಾಂದೋಗ್ಯ,* ೧:೪:೧೦), **"ಶುದ್ಧವಾದ ನೀರಿನಲ್ಲಿ ಸೇರಿದ ನೀರು ಶುದ್ಧವಾದ ನೀರೇ ಆಗಿಬಿಡುವುದು** (*ಕಠ ಉಪನಿಷತ್ತು,* ೨:೪:೧೫). **–** ಉಪನಿಷತ್ತುಗಳ ಈ ವಾಕ್ಯಗಳು ಮುಕ್ತಪುರುಷನ ಬ್ರಹ್ಮೈಕ್ಯಭಾವವನ್ನು ವಿವರಿಸುತ್ತವೆ.

### ಉಪಸಂಹಾರ

ಹಿಂದೂಧರ್ಮದ ವಿವಿಧ ಮತಗಳಿಗೆ ಆಧಾರಭೂತವಾದುದು ಉತ್ತರಮೀಮಾಂಸಾ ದರ್ಶನವೇ. ಉಪನಿಷತ್ತುಗಳ ತರ್ಕಬದ್ಧ ಮತ್ತು ಕ್ರಮಬದ್ಧ ಅಧ್ಯಯನವೇ ಇದರ ತಿರುಳು. ಇದು ಬೌದ್ಧಿಕ ಜಿಜ್ಞಾಸೆಯ ಮಟ್ಟದಲ್ಲಿ ಮಾತ್ರ ನಿಂತುಬಿಡದೆ, ಆಧ್ಯಾತ್ಮಿಕ ಸಾಧನೆಯ ಮಹತ್ವವನ್ನೂ ಮನಗಾಣಿಸುತ್ತದೆ. ಹಾಗೂ, ಅದಕ್ಕೆ ಬೇಕಾದ ತಾತ್ತ್ವಿಕ ಮತ್ತು ದೈವಶಾಸ್ತ್ರೀಯ ಭೂಮಿಕೆಯನ್ನು ಸಿದ್ಧಪಡಿಸಿಕೊಡುತ್ತದೆ. ಉಪನಿಷತ್ತುಗಳ ಅಭಿಪ್ರಾಯಕ್ಕೆ ವಿರೋಧವಾಗದಂತೆ, ತರ್ಕವನ್ನು ಉತ್ಕೃಷ್ಟರೀತಿಯಲ್ಲಿ ಉಪಯೋಗಿಸಿಕೊಂಡು, ವೈಚಾರಿಕ ಸತ್ಯಾನ್ವೇಷಣೆಯನ್ನು ನಡೆಸುವ ವೈಜ್ಞಾನಿಕ ವಿಧಾನ ನಮಗಿಲ್ಲಿ ಗೋಚರವಾಗುತ್ತದೆ. ಹೀಗಾಗಿ ನಮ್ಮ ಪೂರ್ವಾಚಾರ್ಯರ ಆಧ್ಯಾತ್ಮಿಕ ಮತ್ತು ತಾರ್ಕಿಕ ಪ್ರೌಢಿಮೆಯ ಶ್ರೇಷ್ಠ ನಿದರ್ಶನವಾಗಿ ಉತ್ತರಮೀಮಾಂಸಾ ದರ್ಶನವು ಕಂಗೊಳಿಸುತ್ತದೆ.

**ಆಧಾರ:** ೧. **ಆಚಾರ್ಯತ್ರಯರ ಬ್ರಹ್ಮಸೂತ್ರ ಭಾಷ್ಯಗಳು**
೨. **ವೇದಾಂತಸೂತ್ರಗಳು,** *ಜಿ.ಹನುಮಂತರಾವ್*

## ಶ್ರೀಶಂಕರಾಚಾರ್ಯರ ಮಾತೃಭಕ್ತಿ

ಶ್ರೀಶಂಕರಾಚಾರ್ಯರು ಅದ್ವೈತಿಗಳಾದರೂ ಮಾತೃಸೇವಾಪರಾಯಣರಾಗಿದ್ದರು. ತಾವು ಮಾತುಕೊಟ್ಟಿದ್ದಂತೆ, ತಮ್ಮ ತಾಯಿಯ ಅಂತ್ಯಕಾಲದಲ್ಲಿ ಕಾಲಟಿಗೆ ಬಂದರು. ಮಲಗಿದ್ದ ತಾಯಿಗೆ ನಮಸ್ಕರಿಸಿ, "ಅಮ್ಮಾ" ಎಂದು ಕೂಗಿದರು. ಚಿರಪರಿಚಿತ ಸ್ವರವನ್ನು ಕೇಳಿ ಆರ್ಯಾಂಬಾ ಕಣ್ಣುತೆರೆದಳು, ನೋಡಿದಳು. ಅದೇ ತನ್ನ ಕರುಳಿನ ಕುಡಿ. ತನ್ನ ಮಗ, ಶಂಕರ. ಅನೇಕ ವರ್ಷಗಳ ನಂತರ ಮನೆಗೆ ಮರಳಿದ ಮಗನ ಮುಖವನ್ನು ನೋಡಿ ಆ ತಾಯಿಗೆ ಹಿಡಿಸಲಾರದಷ್ಟು ಹರ್ಷವಾಯಿತು. "ಶಂಕರಾ, ಬಂದೆಯಾ" ಎಂದು ಸಂತೋಷದಿಂದ ಕಣ್ಣೀರು ಸುರಿಸಿದಳು. ಅವಳ ಮನಸ್ಸು ತುಂಬಾ ಸಮಾಧಾನವನ್ನು ಹೊಂದಿತು. ಇನ್ನು ಮೇಲೆ ನಿಶ್ಚಿಂತೆಯಿಂದ ಪ್ರಾಣಬಿಡಲು ಆಕೆ ನಿಶ್ಚಯಿಸಿದಳು.

ಮರಣೋನ್ಮುಖಳಾಗಿದ್ದ ತಮ್ಮ ತಾಯಿಯ ಸೇವೆಯನ್ನು ಭಗವತ್ಪಾದರು ಅತ್ಯಂತ ಭಕ್ತಿ ಹಾಗೂ ಶ್ರದ್ಧೆಗಳಿಂದ ಮಾಡಿದರು. ಮಮತೆಯ ಮಗ ತಾನು ಮಾತುಕೊಟ್ಟಿದ್ದಂತೆ ಸೇವೆ ಮಾಡುತ್ತಿರುವುದು ಅವಳಿಗೆ ತನ್ನ ಸುಕೃತವೆನಿಸಿತು. ಆಕೆಯು, "ಮಗು, ಶಂಕರಾ! ಇನ್ನು ಸ್ವಲ್ಪ ಸಮಯದಲ್ಲಿಯೇ ನಾನು ಇಹಲೋಕ ತ್ಯಜಿಸುವವಳಿದ್ದೇನೆ. ಸಾವು ನನ್ನನ್ನು ಕರೆಯುತ್ತಿದೆ. ಅಂತ್ಯಕಾಲದಲ್ಲಿ ಮನಶ್ಶಾಂತಿಗೆ ಅನುಕೂಲವಾಗುವಂಥ ಹಾಗೂ ಮೋಕ್ಷಕಾರಕವಾದ ಉಪದೇಶವನ್ನು ನೀಡುವೆಯಾ? ನಾನು ಏನೂ ತಿಳಿಯದವಳು. ನೀನು ಸರ್ವಜ್ಞ, ನೀನೇ ನನ್ನ ಪಾಲಿಗೆ ರಕ್ಷಕ, ಉದ್ಧಾರಕ" ಎಂದು ಕೇಳಿಕೊಂಡಳು. ಶಂಕರರು ಸಂತೋಷದಿಂದ ಆಕೆಗೆ ನಿರ್ಗುಣ ಬ್ರಹ್ಮತತ್ತ್ವವನ್ನು ವಿವರಿಸಿ ಹೇಳಿದರು. ಆದರೆ ಆರ್ಯಾಂಬೆಗೆ ಆ ಬ್ರಹ್ಮಾತ್ಮೈಕ್ಯಜ್ಞಾನವು ಅರ್ಥವಾಗಲಿಲ್ಲ.

ಆಗ ಆಕೆಯು, "ಶಂಕರಾ, ನನ್ನ ಮನಸ್ಸು ನಿರ್ಗುಣಬ್ರಹ್ಮನಲ್ಲಿ ನೆಲೆಗೊಳ್ಳಲು ಸಮರ್ಥವಾಗಿಲ್ಲ. ಸಾಮಾನ್ಯ ಮಾನಸಿಕ ಸಾಮರ್ಥ್ಯಕ್ಕೆ ನಿಲುಕುವ ಸಗುಣೋಪಾಸನೆಯನ್ನು ಉಪದೇಶಿಸು" ಎಂದು ಹೇಳಿದಳು. ಅದಲ್ಲದೆ, "ಅಂದು ಮೊಸಳೆ ನಿನ್ನ ಕಾಲು ಹಿಡಿದು ಎಳೆಯುತ್ತಿದ್ದಾಗ ನಿನ್ನ ಜೀವ ಉಳಿದರೆ ನನ್ನ ಜೀವವನ್ನು ಶ್ರೀಕೃಷ್ಣನಿಗೆ ಸಮರ್ಪಿಸುವುದಾಗಿ ಹರಕೆಹೊತ್ತಿದ್ದೆ. ಆ ಹರಕೆಯನ್ನು ತೀರಿಸುವ ಸಮಯ ಸನ್ನಿಹಿತವಾಗಿದೆ. ನಾನು ಶ್ರೀಮಹಾವಿಷ್ಣುವಿನ ಪಾದಾರವಿಂದವನ್ನು ಸೇರಲು ನನ್ನನ್ನು ಅಲ್ಲಿಗೆ ಕಳಿಸಿಕೊಡು" ಎಂದಳು.

ಶಂಕರರು ತಾಯಿಯ ಅಪೇಕ್ಷೆಯಂತೆ ಪರಮಾತ್ಮನ ಸ್ವರೂಪವನ್ನು ಸರಳವಾಗಿ ವಿವರಿಸಿದರು. ಸಗುಣ ಭಕ್ತಿಯನ್ನು ಬೋಧಿಸಿದರು. ಶ್ರೀಕೃಷ್ಣನ ಸೌಮ್ಯರೂಪವು ಆಕೆಯ ಮನಸ್ಸಿನಲ್ಲಿ ನೆಲೆ ನಿಲ್ಲುವಂತೆ ಅನುಗ್ರಹಿಸಿದರು. ಆರ್ಯಾಂಬೆಯ ಮನಸ್ಸು ಶ್ರೀಕೃಷ್ಣನ ಕಮನೀಯ ದರ್ಶನದಿಂದ ಆನಂದವನ್ನು ಅನುಭವಿಸಿತು. ಆ ಮನೋಹರ ಮೂರ್ತಿಯ ಧ್ಯಾನದಲ್ಲಿ ಆಕೆ ಲೀನಳಾದಳು.

ಆಚಾರ್ಯರು, 'ಗೋವಿಂದಾಷ್ಟಕ' ಮುಂತಾದ ತತ್ತ್ವಬೋಧಕವಾದ ಅಮರ ಸಂದೇಶದಿಂದ ಕೂಡಿದ ಸ್ತೋತ್ರಗಳನ್ನು ಹೇಳುತ್ತಿದ್ದರು. ಅದನ್ನು ಕೇಳುತ್ತ, ಕೇಳುತ್ತ ಆಕೆ ವಿಷ್ಣುವಿನಲ್ಲಿ ತಾದಾತ್ಮ್ಯ ಭಾವವನ್ನು ಪಡೆದಳು. ಆರ್ಯಾಂಬೆ, "ಶಂಕರಾ! ಇನ್ನು ನಾನು ಹೊರಡುತ್ತೇನೆ" ಎಂದು ಹೇಳಿ ಶ್ರೀಕೃಷ್ಣನ ಧ್ಯಾನ ಮಾಡುತ್ತಾ, ಶಾಂತಚಿತ್ತದಿಂದ ಭೌತಿಕದೇಹವನ್ನು ತೊರೆದಳು.

ಆಚಾರ್ಯರು ಕ್ಷಣಕಾಲ ಮರುಗಿದರು. 'ಮಾತೃಪಂಚಕ' ಎಂಬ ಶ್ಲೋಕವನ್ನು ರಚಿಸಿ ಹಾಡಿದರು. ತಾಯಿಯ ಅಂತ್ಯಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಂಡರು. ತಮ್ಮ ಪೂರ್ವಾಶ್ರಮದ ಬಂಧುಗಳನ್ನು ಸಹಕರಿಸುವಂತೆ ಕೇಳಿಕೊಂಡರು. ಆದರೆ ಕರ್ಮಠರೂ, ಅಸೂಯಾಪರರೂ ಆದ ಅವರು, ಸಂನ್ಯಾಸಿಯಾದವನಿಗೆ ದಹನಸಂಸ್ಕಾರದಲ್ಲಿ ಅಧಿಕಾರವಿಲ್ಲ ಎಂದು ಹೇಳಿ ನಿರಾಕರಿಸಿದರು. ಅಲ್ಲದೆ, ಅಗ್ನಿಯನ್ನು ಕೊಡಲೂ ನಿರಾಕರಿಸಿದರು. ಶಂಕರರು ಧೈರ್ಯಗೆಡಲಿಲ್ಲ. ಅಗ್ನಿದೇವನನ್ನು ಸ್ಮರಿಸಿ ತಮ್ಮ ಎರಡೂ ಅಂಗೈಗಳನ್ನು ಮಥಿಸಿ ಅಗ್ನಿಯನ್ನು ಉತ್ಪಾದಿಸಿದರು. ಅದರಿಂದ ಚಿತೆಗೆ ಅಗ್ನಿಸ್ಪರ್ಶ ಮಾಡಿ ತಾಯಿಯ ದೇಹದ ದಹನಕಾರ್ಯವನ್ನು ನೆರವೇರಿಸಿದರು.

(ಆಧಾರ: *ಆಚಾರ್ಯತ್ರಯರು,* ಸಿ.ಲಕ್ಷ್ಮೀನಾರಾಯಣನ್)




**ಶ್ರೀರಾಮಕೃಷ್ಣ–ವಿವೇಕಾನಂದರ ವಿಚಾರಗಳು ಉಪನಿಷತ್ತುಗಳ ವೇದಾಂತತತ್ತ್ವಕ್ಕೆ ಹೇಗೆ ಸಮ್ಮತವಾಗಿವೆ ಮತ್ತು ತಾತ್ತ್ವಿಕ ದೃಷ್ಟಿಯಿಂದ ಹೇಗೆ ಸಮಂಜಸವಾಗಿವೆ ಎನ್ನುವುದನ್ನು ವಿಚಾರಪೂರ್ಣವಾಗಿ ವಿವರಿಸಿರುವ ಸ್ವಾಮೀಜಿಯವರು 'ವಿವೇಕಪ್ರಭ' ಪತ್ರಿಕೆಯ ಪ್ರಥಮ ಸಂಪಾದಕರು ಮತ್ತು ಪ್ರಸ್ತುತ, ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು.**

**ಶಾ**ಬ್ದಿಕವಾಗಿ ವೇದಾಂತವೆಂದರೆ ವೇದಗಳ ಅಂತ. ವೇದಾಂತದ ಮುಖ್ಯ ವಿಷಯ ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನ. ಎಲ್ಲ ವೈದಿಕಕರ್ಮಗಳ ವಿಧಿ–ನಿಷೇಧಗಳ ಚರಮ ಗುರಿಯೇ ಈ ಆತ್ಮಜ್ಞಾನ – ಎಲ್ಲವೂ ಈ ಜ್ಞಾನದಲ್ಲಿ ಪರ್ಯವಸಾನಗೊಳ್ಳಬೇಕು. ಭಗವದ್ಗೀತೆಯಲ್ಲಿ ಹೇಳಿರುವಂತೆ, **ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ** – "ಹೇ ಪಾರ್ಥ, ಎಲ್ಲ ಕರ್ಮಗಳೂ ಜ್ಞಾನದಲ್ಲಿ ಪರಿಸಮಾಪ್ತಿಗೊಳ್ಳುತ್ತವೆ" (ಗೀತೆ, ೪.೩೩).

## ಜ್ಞಾನವೆಂದರೇನು?

ಸಾಮಾನ್ಯಾರ್ಥದಲ್ಲಿ ಜ್ಞಾನವೆಂದರೇನು? ಜ್ಞಾನವೆಂದರೆ ಕೇವಲ ಹೆಸರಿಡುವುದು. ನಾವು ಯಾವುದಾದರೂ ವಸ್ತುವನ್ನೊ ಗುಣವನ್ನೊ ಅಥವಾ ಕ್ರಿಯೆಯನ್ನೊ ನೋಡುತ್ತೇವೆ ಮತ್ತು ಅದಕ್ಕೆ ಒಂದು ಹೆಸರನ್ನು ಕೊಡುತ್ತೇವೆ. ಸಮಾನ ವಸ್ತುಗಳನ್ನು ಒಂದು ವರ್ಗಕ್ಕೆ ಸೇರಿಸಿ ಆ ವರ್ಗಕ್ಕೆ ಒಂದು ಹೆಸರನ್ನು ಕೊಡುತ್ತೇವೆ. ಹೀಗೆ ಹೊಸ ವಿಷಯಗಳು ನಮ್ಮ ಗಮನಕ್ಕೆ ಬಂದಾಗಲೆಲ್ಲ ಅವಕ್ಕೆ ಬೇರೆ ಬೇರೆ ಹೆಸರನ್ನು ಕೊಡುತ್ತೇವೆ ಅಥವಾ ಆಗಲೇ ತಿಳಿದಿರುವ ವರ್ಗಕ್ಕೆ ಸೇರಿಸಿ ಒಂದು ಹೆಸರನ್ನು ನೀಡುತ್ತೇವೆ. ಹೀಗೆ ಒಂದು ವರ್ಗಕ್ಕೆ ಸೇರಿಸುವುದರ ಮೂಲಕ, ಹೆಸರಿಡುವುದರ ಮೂಲಕ, ನಮಗೆ ಆ ವಿಷಯ ತಿಳಿದಿದೆ ಎಂದು ಭಾವಿಸುತ್ತೇವೆ. ಈ ರೀತಿ ಹೆಸರಿಡುವುದು ವಸ್ತುವಿನ ಗುಣ, ಆಕಾರ ಮತ್ತು ಕ್ರಿಯೆ ಇವುಗಳನ್ನು ಅವಲಂಬಿಸಿರುತ್ತದೆ. ಆದರೆ ವಸ್ತುವಿನ ನಿಜಸ್ವರೂಪ ಏನು ಎಂದು ವಿಶ್ಲೇಷಿಸುತ್ತ ಹೋದರೆ ನಮಗೇನೂ ಗೊತ್ತಿಲ್ಲ ಎಂದೇ ಹೇಳಬೇಕಾಗುತ್ತದೆ. ನಾವು ಯಾವುದೇ ವಸ್ತುವನ್ನು ವಿಶ್ಲೇಷಿಸುತ್ತ ಹೋದರೂ ಕೊನೆಯಲ್ಲಿ ಅಜ್ಞೇಯದಲ್ಲೇ ಅದು ಕೊನೆಗೊಳ್ಳುತ್ತದೆ. **ವಿಷಯ** ಮತ್ತು **ವಿಷಯಿ** ಇವೆರಡನ್ನೂ ನಾವು ತಿಳಿಯಲಾರೆವು. ಜ್ಞಾನವು ಅಜ್ಞಾನದಲ್ಲಿ ಕೊನೆಗೊಳ್ಳುತ್ತದೆ ಎಂದು – ಅದು ವಿರೋಧಾಭಾಸವಾದರೂ – ಹೇಳಬೇಕಾಗುತ್ತದೆ. ನಾವು ಹೆಚ್ಚು ಹೆಚ್ಚು ತಿಳಿಯುತ್ತ ಹೋದಷ್ಟೂ ಕಡಮೆ ಕಡಮೆ ತಿಳಿದಿರುವ ಅರಿವು ನಮಗುಂಟಾಗುತ್ತದೆ. ಕೊನೆಗೆ "ನನಗೇನೂ ಗೊತ್ತಿಲ್ಲ" ಎಂದೇ ಹೇಳಬೇಕಾಗುತ್ತದೆ. "ಪ್ರಬುದ್ಧ ಅಜ್ಞಾನವೇ ತತ್ತ್ವಜ್ಞಾನದ ಕೊನೆ ಮತ್ತು ಧರ್ಮದ ಆರಂಭ" ಎಂದು ಹ್ಯಾಮಿಲ್ಟನ್ ಎಂಬ ಲೇಖಕರು ಹೇಳುತ್ತಾರೆ.

ಜ್ಞಾನಾರ್ಜನೆಯ ಈ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಎರಡು ರೀತಿಯ ಪ್ರವೃತ್ತಿಗಳನ್ನು ಗುರುತಿಸಬಹುದು: **ವಿಶ್ಲೇಷಣಾತ್ಮಕ** (analytical) ಮತ್ತು **ಸಮುಚ್ಚಯಾತ್ಮಕ** (synthetic). ಮೊದಲನೆಯ ಪ್ರವೃತ್ತಿಯವರು ವಿಷಯಗಳನ್ನು ವೈಶಿಷ್ಟ್ಯಗಳಿಗನುಗುಣವಾಗಿ ವಿಭಾಗಿಸುತ್ತ ಹೋಗುತ್ತಾರೆ, ಎಲ್ಲವನ್ನೂ ಪ್ರತ್ಯೇಕವಾಗಿ ಕಾಣುತ್ತಾರೆ ಮತ್ತು ತಿಳಿದುಕೊಳ್ಳುತ್ತಾರೆ. ಹಾಗೂ ಕಡಮೆ ವಿಷಯಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಬಯಸುತ್ತಾರೆ. ಎರಡನೆಯ ಪ್ರವೃತ್ತಿಯವರು ಎಲ್ಲದರ ಒಟ್ಟು ಜ್ಞಾನವನ್ನು ಬಯಸುತ್ತಾರೆ, ಎಲ್ಲದರ ಒಂದು ಮೂಲವನ್ನು ಹುಡುಕುತ್ತಾರೆ ಮತ್ತು ಎಲ್ಲದರ ಸಾರವನ್ನು ಬಯಸುತ್ತಾರೆ. **ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ** – "ಯಾವುದನ್ನು ತಿಳಿದುಕೊಂಡರೆ ಇದೆಲ್ಲವನ್ನೂ ತಿಳಿದುಕೊಂಡಂತಾಗುತ್ತದೆ?" (ಮು.ಉ.೧.೧.೩) ಎಂದು ಕೇಳಿದ ಶಿಷ್ಯನ ಮನೋಭಾವ ಅವರದು. ಮೊದಲನೆಯವನಿಗೆ ಪ್ರತ್ಯೇಕ ಮರಗಳಲ್ಲಿ ಆಸಕ್ತಿ, ಎರಡನೆಯವನಿಗೆ ಕಾಡಿನಲ್ಲಿ ಆಸಕ್ತಿ. ಒಬ್ಬನದು ವ್ಯಷ್ಟಿಭಾವ, ಮತ್ತೊಬ್ಬನದು ಸಮಷ್ಟಿಭಾವ. ವೈಜ್ಞಾನಿಕ ಅನ್ವೇಷಣೆಗಳೆಲ್ಲ ಹೆಚ್ಚಾಗಿ ಮೊದಲನೆಯ ವರ್ಗಕ್ಕೆ ಸೇರುತ್ತವೆ. ತತ್ತ್ವಶಾಸ್ತ್ರದಲ್ಲಿಯೂ ನ್ಯಾಯ, ವೈಶೇಷಿಕ ಮುಂತಾದ ದರ್ಶನಗಳು ಮೊದಲನೆಯ ವರ್ಗಕ್ಕೆ ಸೇರುತ್ತವೆ. ಇವೆರಡೂ ಅನ್ವೇಷಣೆಯ ವಿವಿಧ ಆಯಾಮಗಳು. ಸತ್ಯ ಒಂದೇ ಆದುದರಿಂದ ಎಲ್ಲ ಅನ್ವೇಷಣೆಯೂ ಒಂದೇ ಗುರಿಯನ್ನು ಸೇರಬೇಕಾಗುತ್ತದೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಏಕತೆಯೇ ಜ್ಞಾನದ ಗುರಿ ಎಂದು ಸಾರಿದರು. 'ಅನೇಕ' ದಲ್ಲಿ 'ಏಕತೆ' ಯನ್ನು ಕಾಣುವುದೇ ವೇದಾಂತದ ಗುರಿಯೂ ಕೂಡ. ಕರ್ಮಗಳೆಲ್ಲ